<u>ದಿನಾಂಕಃ **22.01.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u> ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ವಾಗಿರುತ್ತವೆ. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರುತ್ತೇನೆ.

**1.** ನನ್ನ ತಾತ ಮತ್ತು ತಂದೆ ಹಾಗೂ ನನ್ನ ಚಿಕ್ಕಪ್ಪ **2** ನೇ ಪ್ರತಿವಾದಿ ಮಾಡಿಕೊಂಡಿರುವ ವಿಭಾಗದ ಪತ್ರದ ಮೂಲ ಪ್ರತಿ ನನ್ನ ಚಿಕ್ಕಪ್ಪನ ಬಳಿ ಇರುತ್ತದೆ. ಅದ್ದರಿಂದ ಅದರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು,

**2.** ಎರಡು ಮತ್ತು ಮೂರನೇ ಪ್ರತಿವಾದಿಗಳು ದಾವಾ ಸ್ವತ್ತನ್ನು **4** ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ ಮೂಲ ಪ್ರತಿ **4** ನೇ ಪ್ರತಿವಾದಿಯ ಬಳಿ ಇರುತ್ತದೆ. ಅದ್ದರಿಂದ ಅದರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **2** ಎಂದು,

**3.** ದಾವಾಸ್ತಿಗೆ ಸಂಬಂದಿಸಿದಂತೆ **2** ಎಂಆರ್ ರಿಜಿಸ್ಟರ್ ಎಕ್ಸಾಕ್ಟ್ ಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ **3** ಮತ್ತು **4** ಎಂದು,

**4.** ದಾವಾಸ್ತಿಗೆ ಸಂಬಂಧಿಸಿದಂತೆ **7** ಆರ್.ಟಿ.ಸಿ ಗಳನ್ನು ಹಾಜರು ಮಾಡಿದ್ದು, ಅವುಗಳನ್ನು ನಿಪಿ **5** ರಿಂದ **11** ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.